# ಬಸ್ ತಡೆದು ಪ್ರತಿಭಟನೆ



ಹೆಬ್ಬಳ್ಳಿ ಗ್ರಾಮದಲ್ಲಿ ಬಸ್ ತಡೆದು ಪ್ರತಿಭಟನೆ ನಡೆಸಲಾಯಿತು.

**ಧಾರವಾಡ:** ಕಳೆದ ಎರಡು ತಿಂಗಳಿಂದ ಗ್ರಾಮಕ್ಕೆ ಸರಿಯಾದ ಸಮಯಕ್ಕೆ ಬಸ್ ಬರದೇ ಇರುವುದನ್ನು ಖಂಡಿಸಿ ಹೆಬ್ಬಳ್ಳಿ ಗ್ರಾಮಸ್ಥರು ಬಸ್‌ಗಳನ್ನು ತಡೆದು ಪ್ರತಿಭಟನೆ ನಡೆಸಿದರು.

ಈ ವೇಳೆ ಇಲಾಖೆ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದ ಗ್ರಾಮಸ್ಥರು, ಸರಿಯಾದ ವೇಳೆಗೆ ಬಸ್ ಬಿಡಲು ಆಗ್ರಹಿಸಿದರು. ಬಸ್ ತಡೆದು ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಶಾಲಾ ವಿದ್ಯಾರ್ಥಿಗಳು ಸೇರಿದಂತೆ ಪ್ರತಿದಿನ ಸಾರಿಗೆ ಬಸ್‌ಗಳನ್ನು ಅವಲಂಬಿಸಿರುವ ನೂರಾರು ಪ್ರಯಾಣಿಕರು ಖಾಸಗಿ ವಾಹನಗಳ ಮೊರೆ ಹೋಗಬೇಕಾಯಿತು. ಈ ವೇಳೆ ಸ್ಥಳಕ್ಕೆ ಆಗಮಿಸಿದ ಇಲಾಖೆಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಗ್ರಾಮಸ್ಥರು ಸಮಸ್ಯೆ ಬಗೆಹರಿಸುವಂತೆ ಆಗ್ರಹಿಸಿದರು.

# ತಡಹಾಳಗೆ ಪಿಎಚ್‌ಡಿ ಪ್ರದಾನ

**ಧಾರವಾಡ:** ರಾಯಾಪೂರದ ಎಸ್.ಜೆ.ಎಂ.ವ್ಹಿ.ಮಹಾಂತ ಮಹಾವಿದ್ಯಾಲಯದ ಸಹಪ್ರಾಧ್ಯಾಪಕ ಶೇಖರ ಎಸ್.ತಡಹಾಳ ಇವರು ಶಿಕ್ಷಣ A Study of Attitude of Degree College Students Towards Value Oriented Education in Relation to some Selected Variables" ಎಂಬ ವಿಷಯದ ಮೇಲೆ ಮಂಡಿಸಿದ ಮಹಾಪ್ರಬಂಧಕ್ಕೆ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಚೆನ್ನೈ ವಿಶ್ವವಿದ್ಯಾಲಯದ ವಿಭಾಗ ಪಿ.ಹೆಚ್.ಡಿ. ಪದವಿಯನ್ನು ಪ್ರದಾನ ಮಾಡಿದೆ.

# ಇನ್‌ಸಿಗ್ನಿಯಾ ಇಂದಿನಿಂದ

**ಧಾರವಾಡ:** ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಅಭಿಯಾಂತ್ರಿಕ ಹಾಗೂ ತಾಂತ್ರಿಕ ಮಹಾವಿದ್ಯಾಲಯ ವತಿಯಿಂದ ಮೂರು ದಿನಗಳ ಕಾಲ ಇನ್‌ಸಿಗ್ನಿಯಾ 2017 ರ ರಾಷ್ಟ್ರಮಟ್ಟದ ತಾಂತ್ರಿಕ ಮತ್ತು ಸಾಂಸ್ಕೃತಿಕ ಉತ್ಸವ ಮಾರ್ಚ್ 16ರಿಂದ 18ರವರೆಗೆ ಮಹಾವಿದ್ಯಾಲಯದ ಸಭಾವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಚಾರ್ಯ ಡಾ.ಎಸ್.ಬಿ.ವನಕುದರೆ ತಿಳಿಸಿದರು.ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರು ದಿನದ ಈ ಮೇಳದಲ್ಲಿ ವಿವಿಧ ಮಹಾವಿದ್ಯಾಲಯದ ತಂಡಗಳ ಮುಖಾಂತರ 2 ಸಾವಿರ ವಿದ್ಯಾರ್ಥಿಗಳು ಭಾಗವಹಿಸಿ 60 ಕ್ಕೂ ಹೆಚ್ಚು ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವರು. ಪೇಪರ ಪ್ರಜೆಂಟೇಶನ್, ಕ್ವಿಜ್, ರೋಬೋಟಿಕ್, ಬೋಟ್ ರೇಸ್ ಸ್ಪರ್ಧೆ, ನೃತ್ಯ ಪ್ರದರ್ಶನ ಹಾಗೂ ಬೀದಿ ನಾಟಕಗಳು ನಡೆಯಲಿವೆ ಎಂದರು.ಮಾ. 16 ರಂದು ಮಾಜಿ ಸಚಿವ ಬಸವರಾಜ ಬೊಮ್ಮಾಯಿ, ಬೆಂಗಳೂರಿನ ಟಿ.ಸಿ.ಎಸ್ ಮುಖ್ಯಸ್ಥ ಡಾ.ಇ.ಎಸ್.ಚಕ್ರವರ್ತಿ ಅತಿಥಿಯಾಗಿ ಆಗಮಿಸಲಿದ್ದು ಎಸ್.ಡಿ.ಎಂ. ಕಾರ್ಯದರ್ಶಿ ಜೀನೇಂದ್ರ ಪ್ರಸಾದ ಅಧ್ಯಕ್ಷತೆವಹಿಸಲಿದ್ದು ಉಪಕಾರ್ಯದರ್ಶಿ ಜೀವಂಧರ ಕುಮಾರ ಉಪಸ್ಥಿತರಿರುತ್ತಾರೆ ಎಂದರು.

ಮಾರ್ಚ್ 17 ರಂದು ಗಾಳಿಪಟ ಉತ್ಸವ ಹಾಗೂ ವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ತಾಂತ್ರಿಕದ ಕುರಿತು ಕಾರ್ಯಾಗಾರ ಜರುಗಲಿದೆ. 18 ರ ಸಂಜೆ 7 ಕ್ಕೆ ರತ್ನ ವರ್ಮ ಹೆಗ್ಗಡೆ ಕ್ರೀಡಾಂಗಣದಲ್ಲಿ ಗಾಯಕ ದರ್ಶನ ರಾವಲ್ ಅವರಿಂದ ಸಂಗೀತ ರಸದೌತಣ ನಡೆಯಲಿದೆ. ಇದಲ್ಲದೆ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ರಕ್ತದಾನ ಶಿಬಿರ ಏರ್ಪಡಿಸಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಡಾ.ಕೆ. ಗೋಪಿನಾಥ, ವಾಸುದೇವ, ಮಹೇಂದ್ರ ದೀಕ್ಷಿತ ಉಪಸ್ಥಿತರಿದ್ದರು.



ಸಿದ್ದೇಶ್ವರ ಶ್ರೀ ಪ್ರವ

**ಪರಿಪೂರ್ಣತೆ ಅನುಭವಿಸೋದ ಸದ್ಭಾವ ಯ**

ಸದ್ಭಾವ ಯೋಗ ಅಂದ್ರೆ ಪರಿಪೂ ಅನುಭವಿಸೋದ. ಕೈವಲ್ಯದ ಅನು ಪಡೆಯೋದ. ಅದಕ್ಕಾಗಿ ಇದು ಸ ಸಾಧನಾ. ಭಾವ ವಿಶಾಲಗೊಳಿಸ್ತಾ ಹ ಪರಿಪೂರ್ಣತೆ ಅನುಭವಿಸ್ತಾದ. ಭಾವ ಯಾವುದೇ ಮೆರೆಗಳಿಲ್ಲದ್ದು, ನಿಸ್ಸ ಅದನ್ನು ಪರಿಪೂರ್ಣ ಅಂತಾರ. ಆಕಾ ವಿಸ್ತಾರ, ಎಷ್ಟು ನೋಡಿದರೂ ಮುಗಿ ಅದಕ್ಕ ಎಲ್ಲಿ ದಂಡಿ ಅದ ಹೇಳಿ. ವಿಜ್ಞಾ ಕೂಡ ಹೇಳ್ತಾರ, ಆಕಾಶಕ್ಕೆ ಕೊನೆ ಇಲ್ಲ ಅದನ್ನ ಮುಟ್ಟಿಲ್ಲ ಆಗಲ್ಲ, ಅಷ್ಟು ವಿ ಆಕಾಶ. ಸಣ್ಣ ಸಣ್ಣ ವಸ್ತು ಭಾವದಟ್ಟಿಕೊಂಡರ ಅದು ಸಣ್ಣದಾ ಆಕಾಶವನ್ನೇ ಇಟ್ಟಾಗ ಆಕಾಶದಷ್ಟ ಅ ಅದರಲ್ಲಿ ಅಷ್ಟು ಶಕ್ತಿ, ಸಾಮರ್ಥ್ಯ ಅದ. ಸಣ್ಣದಕ್ಕ ಸಣ್ಣದ ಆಗ್ತಾದ, ದೊ ದೊಡ್ಡದ ಆಗ್ತಾದ, ಇದು ಸನ್ನದು, ಅನ್ ಇದು ಅಲ್ಪ ಚೇತನ. ಸಣ್ಣವರ ಸಣ್ಣದಾಗ್ತಾದ, ದೊಡ್ಡವರ ದೊಡ್ಡದಾಗ್ತದ, ಅದಕ್ಕೆ ಅದನ್ನ ವಸು ಕುಟುಂಬಕಂ ಅಂತಾರ. ಬಸವಣ್ಣ 900 ವರ್ಷಗಳ ಹಿಂದೆ ಆಗ ಏನೂ ಇ ವಾಹನ, ಅನುಕೂಲತೆ ಇರಲಿಲ್ಲ, ಹೇಳಿದ್ದರು ಹರವು, ಹರವು, ಭಾವ ವಿ ಅದಕ್ಕ ಅವರಿಗೆ ಮಹಾತ್ಮ ಅಂತ ಕರಿತೀ

ನಾಡು ಮೆಚ್ಚಿದ ಜನನಾಯಕ, ಸಹಕಾರ ರಂಗದ ಭೀಷ್ಮ

ಡಾ.ಕರ್ಲೆಟ್ಸ್ ಪ